**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

**PCR.No.1/2022**

**ಸಿಡಬ್ಲ್ಯೂ-1**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಬಸವರಾಜ ತಂದೆ ಹನುಮಯ್ಯ |
| ವಯಸ್ಸು | ಃ | 45 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಜಾನಮರಡಿ |
| ಪ್ರಮಾಣೀಕರಿಸಿದ ದಿನಾಂಕ | ಃ | 18-01-2025 |

**ಅರ್ಜಿದಾರನ ಪ್ರಮಾಣೀಕೃತ ಹೇಳಿಕೆಃ**

ದಿನಾಂಕ **11-06-2021** ರಂದು ಜಾನಮರಡಿ ಗ್ರಾಮದ ಜಮೀನು ಸರ್ವೆ ನಂಬರ **247** ರಲ್ಲಿ ನನಗೆ ಸೇರಿದ **3** ಎಕರೆ **4** ಗುಂಟೆ ಜಮೀನು ಇದ್ದು ನನ್ನ ತಾಯಿ ಹನುಮಂತಿಗೆ ಸೇರಿದ **1** ಎಕರೆ **19** ಗುಂಟೆ ಜಮೀನು ಇದ್ದು ಸದರಿ ನನ್ನ ತಾಯಿಯ ಜಮೀನಿನಲ್ಲಿ ಬೆಳಿಗ್ಗೆ **8-00** ಗಂಟೆಗೆ ಮಲ್ಲಣ್ಣ ತಂದೆ ಹನುಮಂತ ಇವರ ಟ್ರ್ಯಾಕ್ಟರ ಮೂಲಕ ಟಿಲ್ಲರ್ ಹೊಡೆಯುತ್ತಿದ್ದು ನಾನು ಸದರಿ ಜಮೀನಿನ ಬದುವಿಗೆ ಇದ್ದ ಗಿಡಗಳನ್ನು ಕಡೆಯುತ್ತಿದ್ದೆ ಆಗ ಸದರಿ ಜಮೀನಿನ ಸುತ್ತ ಇರುವ ವಿದ್ಯುಚ್ಚಕ್ತಿ ಕಂಬಗಳು ಇದ್ದು, ಸದರಿ ಕಂಬದಿಂದ ವಿದ್ಯುತ್ ಚ್ಛಕ್ತಿ ತಂತಿ ಕಟ್ಟಾಗಿ ನನ್ನ ಎಡಗೈ ಮುಂಗೈ ಮೇಲೆ ಬಿದ್ದಿದ್ದು ಹಾಗೂ ಇನ್ನೊಂದು ವೈಯರ್ ಮೈಮೇಲೆ ಬಿದ್ದು ವಿದ್ಯುತ್ ತಗುಲಿ ನಾನು ಪ್ರಜ್ಞೆ ತಪ್ಪಿ ಬಿದ್ದಿರುತ್ತೇನೆ. ನಂತರ ಟ್ರ್ಯಾಕ್ಟರ ಚಾಲಕ ಮಲ್ಲಣ್ಣ ನನ್ನ ಮನೆಯವರಿಗೆ ಫೋನ್ ಮಾಡಿ ಕರೆಯಿಸಿದ್ದು ನನ್ನನ್ನು ಆಸ್ಪತ್ರೆಗೆ ಸಾಗಿಸಿರುತ್ತಾರೆ. ನಂತರ ಘಟನೆಯಾದ ಅಂದಾಜು **30** ದಿನಗಳ ಆಸುಪಾಸಿನಲ್ಲಿ ನನಗೆ ಪ್ರಜ್ಞೆ ಬಂದಿರುತ್ತದೆ. ಪ್ರಜ್ಞೆ ಬಂದ ನಂತರ ನನಗೆ ಮೈಯಲ್ಲಾ ಸುಟ್ಟ ಗಾಯಗಳು ಆಗಿರುತ್ತವೆ. ಘಟನೆಯಾದ **03** ತಿಂಗಳುಗಳ ವರೆಗೆ ನನಗೆ ಅಡ್ಡಾಡಲು ಬರುತ್ತಿರಲಿಲ್ಲ. ಘಟನೆಯಾದ **03** ತಿಂಗಳುಗಳ ನಂತರ ನಾನು ಜಾಲಹಳ್ಳಿ ಪೊಲೀಸ ಠಾಣೆಗೆ ಹೋಗಿ ದೂರು ನೀಡಿದ್ದು, ಸದರಿ ಪೊಲೀಸರು ದೂರು ತೆಗೆದುಕೊಳ್ಳಲು ಬರುವುದಿಲ್ಲ ಎಂದು ಹೇಳಿರುತ್ತಾರೆ. ಪೊಲೀಸ ವರಿಷ್ಠಾಧಿಕಾರಿಗಳಿಗೆ ಅಂಚೆ ಮೂಲಕ ದೂರು ಕಳುಹಿಸಿರುವ ಬಗ್ಗೆ ಈಗ ನನಗೆ ನೆನಪಿನಲ್ಲಿ ಇರುವುದಿಲ್ಲ. ಸದರಿ ವಿದ್ಯುತ್‌ಚ್ಛಕ್ತಿ ವೈಯರ್ ಸಾಕಷ್ಟು ಹಳೆಯದಾಗಿದ್ದು ಸದರಿ ವೈಯರ್ ಕಟ್ಟಾಗಿ ನನ್ನ ಮೇಲೆ ಬಿದ್ದಿರುತ್ತದೆ. ಕೆಇಬಿ ಯವರ ತಪ್ಪಿನಿಂದಾಗಿ ಘಟನೆ ಸಂಭವಿಸಿರುತ್ತದೆ. ಪೊಲೀಸರು ಪ್ರಕರಣ ದಾಖಲಿಸಿಕೊಳ್ಳದೇ ಇರುವುದರಿಂದ ನ್ಯಾಯಾಲಯದಲ್ಲಿ ವಕೀಲರ ಮೂಲಕ ಖಾಸಗಿ ದೂರನ್ನು ಸಲ್ಲಿಸಿರುತ್ತೇನೆ. ಈ ಪ್ರಕರಣ ದಾಖಲಿಸಿದ ನಂತರವೂ ಸಹ ಪೊಲೀಸರು ನನ್ನನ್ನು ವಿಚಾರಣೆ

ಮಾಡಿರುವುದಿಲ್ಲ ಹಾಗೂ ಘಟನಾ ಸ್ಥಳಕ್ಕೆ ಪೊಲೀಸರು ಬಂದಿರುವುದಿಲ್ಲ, ಯಾವುದೇ ತನಿಖೆ ಮಾಡಿರುವುದಿಲ್ಲ.

ಪೊಲೀಸ್ ವರಿಷ್ಠಾಧಿಕಾರಿ ರಾಯಚೂರು ಇವರಿಗೆ ನೀಡಿದ ದೂರಿನ ಸ್ವೀಕೃತಿ ಪ್ರತಿಯನ್ನು ನಿಸಿ-**1** ಎಂದು ಗುರುತಿಸಲಾಯಿತು. ಸರ್ವೆ ನಂಬರ **247/5** ರ ಪಹಣಿಯನ್ನು ನಿಸಿ-**2** ಎಂದು ಗುರುತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.